	ಕೇಂದ್ರ.	ನಿರ್ವಹಿಸಲು ಟೆಂಡರ್ ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರಿಂಗ್ ಪ್ರಕ್ರಿಯೆ ಪ್ರಗತಿಯಲ್ಲಿದೆ
6	ಸಿದ್ದಾಪೂರ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರ	ಸದರೀ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ತಾಂತ್ರಿಕ ಸಲಹಾ ಸಮಿತಿಯು ಡಿಸೆಂಬರ್ 2006 ರಲ್ಲಿ ಅನುಮೋದನೆಯನ್ನು ನೀಡಿರುತ್ತದೆ ಈ ವಿದ್ಯುತ್ ವಿತರಣಾ ಕೇಂದ್ರದ ನಿರ್ಮಾಣಕ್ಕೆ ಸಂಬಂಧಿಸಿದ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ

ಇ) 33/11 ಕೆ ವಿ ಸಾಮರ್ಥ್ಯದ ಎಷ್ಟು ವಿದ್ಯುತ್ ವಿತರಣಾ ಕೇಂದ್ರಗಳನ್ನು 110/33 ಕೆ ವಿ ಸಾಮರ್ಥ್ಯಕ್ಕೆ ಉನ್ನತೀಕರಣಗೊಳಿಸುವ ಯೋಜನೆ ಸರ್ಕಾರದಲ್ಲಿದೆಯೆ,

ಸದರೀ ಮತಕ್ಷೇತ್ರದ ವ್ಯಾಪ್ತಿಯಲ್ಲಿ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಗಳನ್ನು 110/33 ಕೆ ವಿ ವಿದ್ಯುತ್ ವಿತರಣಾ ಕೇಂದ್ರಗಳನ್ನಾಗಿ

ಉನ್ನತೀಕರಣಗೊಳಿಸುವ ಯಾವುದೇ ಪ್ರಸ್ತಾವನೆಯು ಸದ್ಯಕ್ಕೆ ಇರುವುದಿಲ್ಲ

ಈ) ಗ್ರಾಮಗಳು ಮತ್ತು ಪುನರ್ವಸತಿ ಕೇಂದ್ರಗಳಲ್ಲಿ ಬಹಳ ವರ್ಷಗಳಿಂದ ಜೋಡಿಸಿ ಈಗ ಹರಿದು ಮುರಿದು ಬೀಳುತ್ತಿರುವ ತಂತಿ–ಕಂಬಗಳನ್ನು ಬದಲಾಯಿಸುವ ಬಗ್ಗೆ ಸರ್ಕಾರದ ಕ್ರಮಗಳೇನು?

ಗ್ರಾಮಗಳು ಮತ್ತು ಪುನರ್ವಸತಿ ಕೇಂದ್ರಗಳಲ್ಲಿರುವ ಹಳೆಯ ಮತ್ತು ಸುಸ್ಥಿತಿಯಲ್ಲಿಲ್ಲದ ವಿದ್ಯುತ್ ತಂತಿ ಮತ್ತು ಕಂಬಗಳನ್ನು ಬದಲಾಯಿಸುವ ಕಾಮಗಾರಿಗಳನ್ನು ವಿದ್ಯುತ್ ಸರಬರಾಜು ಕಂಪನಿಗಳು ಆದ್ಯತೆ ಮೇರೆಗೆ ನಿರ್ವಹಿಸುತ್ತಿವೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1144(1302)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಂ ವೈ (ಅಫಜಲಪುರ)**
ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)**

ಅ) ಅಲ್ಪಸಂಖ್ಯಾತರ ಇಲಾಖೆಯ ವಕ್ಫ್ ಬೋರ್ಡಿನಿಂಧ ಗುಲ್ಬರ್ಗಾ ಜಿಲ್ಲೆಯ ಮಸೀದಿ ಮತ್ತು ದರ್ಗಾಗಳಿಗೆ ಕಳೆದ ಮೂರು ವರ್ಷದಲ್ಲಿ ಬಿಡುಗಡೆಯಾದ ಹಣ ಎಷ್ಟು (ವರ್ಷವಾರು ವಿವರ ನೀಡುವುದು)

ವಕ್ಫ್ ಬೋರ್ಡಿನಿಂದ ಗುಲಬರ್ಗಾ ಜಿಲ್ಲೆಯ ಮಸೀದಿ ಮತ್ತು ದರ್ಗಾಗಳಿಗೆ ಕಳೆದ 3 ಹಣದ ವಿವರಗಳು ಈ ಕೆಳಕಂಡಂತೆ ಇರುತ್ತದೆ

ವರ್ಷ ವಕ್ಫ್ ಹಣ ಬಿಡುಗಡೆ

ಸಂಸ್ಥೆಗಳು

1) 2004–05 66 13,80 000–00
2) 2005–06 40 8,95,000–00
3) 2006–07– ಈ ಅವಧಿಯಲ್ಲಿ
ಸರ್ಕಾರವು ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ

ಆ) ಅಫಜಲಪುರ ತಾಲ್ಲೂಕಿನಲ್ಲಿರುವ ದರ್ಗಾ ಹಾಗು ಮಸೀದಿಗಳಿಗೆ ಬಿಡುಗಡೆ ಮಾಡಿರುವ ಹಣ ಎಷ್ಟು (ವಿವರಗಳನ್ನು ನೀಡುವುದು)

ಕಳೆದ 3 ವರ್ಷದ ಅವಧಿಯಲ್ಲಿ ಅಫಜಲಪುರ ತಾಲ್ಲೂಕಿನಲ್ಲಿರುವ ದರ್ಗಾ ಮತ್ತು ಮಸೀದಿಗಳಿಗೆ ಹಣ ಬಿಡುಗಡೆ ಮಾಡಿರುವ ವಿವರಗಳು ಈ ಕೆಳಕಂಡಂತಿವೆ

1) 2004–05 06 1,20,000–00
2) 2005–06 04 80,000–00
3) 2006–07–ಈ ಅವಧಿಯಲ್ಲಿ ಸರ್ಕಾರವು ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ

ಇ) ಪ್ರಸ್ತುತ ಸಾಲಿನಲ್ಲಿ ಅಫಜಲಪುರ ತಾಲ್ಲೂಕಿನ ಮಸೀದಿಗಳಿಗೆ ಹಾಗೂ ದರ್ಗಾಗಳಿಗೆ ಹಣ ಬಿಡುಗಡೆ ಮಾಡಲಾಗುವುದೇ?

ಪ್ರಸ್ತುತ ಸಾಲಿನಲ್ಲಿ ಅಫಜಲಪುರ ದರ್ಗಾ ಮತ್ತು ಮಸೀದಿಗಳಿಗೆ ಪ್ರಸ್ತಾವನೆಗಳು ಬಂದಲ್ಲಿ ಹಣದ ಲಭ್ಯತೆಯನುಸಾರ ಕ್ರಮ ತೆಗೆದು ಕೊಳ್ಳಲಾಗುವುದು